International Journal of Applied Research 2015; 1(2): 153-155




**ISSN Print:** 2394-7500
**ISSN Online:** 2394-5869
**Impact Factor:** 3.4
IJAR 2015; 1(2): 153-155
www.allresearchjournal.com
Received: 20-11-2014
Accepted: 24-12-2014

**Dr. YA Devarushi**
Assistant Professor, Kannada Dept, C. B. College Bhalki, Dist: Bidar. Karnatak, India

**Correspondence**
**Dr. YA Devarushi**
Assistant Professor, Kannada Dept, C. B. College Bhalki, Dist: Bidar. Karnatak, India

# ಶಾಂತರಸರ 'ಸಣ್ಣಗೌಡಸಾನಿ' ಕಾದಂಬರಿ; ಒಂದು ಅವಲೋಕನ

**Dr. YA Devarushi**

ಉದಾತ್ತ ದೇಶಿ ಪರಂಪರೆಯಲ್ಲಿ ಮೂಡಿ ಬಂದ ಅತ್ಯುತ್ತಮ ಕಾದಂಬರಿಗಳಲ್ಲಿ ಶಾಂತರಸ ಅವರ 'ಸಣ್ಣಗೌಡಸಾನಿ' ಕಾದಂಬರಿಯೂ ಒಂದು. ಹೈದ್ರಾಬಾದ-ಕರ್ನಾಟಕ ಪ್ರದೇಶದ ಹಿರಿಯ ಸಾಹಿತಿ ಶಾಂತರಸರು ತಮ್ಮ ಕೃತಿಗೆ ಸಣ್ಣಗೌಡಸಾನಿ ಎಂದು ಅರ್ಥ ಪೂರ್ಣ ಹೆಸರು ಇಟ್ಟಿರುವುದು ವಿಶೇಷವಾಗಿದೆ. ಸಣ್ಣಗೌಡಸಾನಿ ಎಂಬುದು 'ಸಣ್ಣಗೌಡತಿ' ಎಂಬ ಅರ್ಥವನ್ನು ಹೊಂದಿದೆ. ಗ್ರಾಮೀಣ ಜನರ ಬದುಕನ್ನು ಚಿತ್ರಿಸುವ ಈ ಕಾದಂಬರಿ 'ಸಣ್ಣಗೌಡತಿ' (ಮಾಬಿ) ಆ ಪಾತ್ರದ ಸುತ್ತಲೂ ಕಾದಂಬರಿಯ ವಿಷಯ ಹೆಣೆದುಕೊಂಡಿದೆ.

ಶಾಂತರಸರು ಗ್ರಾಮೀಣ ಬದುಕಿನ ನೋವು-ನಲಿವು, ಅನುಭವಗಳನ್ನು ಕಂಡು-ಉಂಡು ಅನುಭವಿಸಿದ ಹಿರಿಯ ತಲೆಮಾರಿನ ಸಾಹಿತಿ, ಇವರು ಹಳ್ಳಿಗರ ಬದಕನ್ನು ಅತಿ ಸಮೀಪದಿಂದ ಕಂಡವರು ಇವರ 'ಸಣ್ಣಗೌಡಸಾನಿ' ಕಾದಂಬರಿಯಲ್ಲಿ ಹೈದ್ರಾಬಾದ-ಕರ್ನಾಟಕ ಪ್ರದೇಶದ ಗ್ರಾಮೀಣ ಬದುಕಿನ ಹಲವು ಮುಖಗಳನ್ನು ಗ್ರಾಮೀಣ ಬದುಕಿನ ಸತ್ವ ಸೊಗಡುಗಳನ್ನು ಕಾಣುತ್ತೇವೆ. ಈ ಕಾದಂಬರಿಯಲ್ಲಿ ಸಣ್ಣಗೌಡಸಾನಿಯಾಗಿ ಮಾಬಿಯ ಪಾತ್ರ ಮೂಡಿ ನಿಂತಿದೆ. ಕಾದಂಬರಿಯನ್ನು ಓದುತ್ತಿದ್ದರೆ ಅದು ಮಾಬಿಯ ಜೀವನದ ಕಥೆಯಂತೆ ಕಂಡರೂ ಮಾಬಿಯ ಕಥೆ ಹೇಳುವುದಷ್ಟೇ ಈ ಕಾದಂಬರಿಯ ಉದ್ದೇಶವಾಗಿಲ್ಲ. ಹೈದ್ರಾಬಾದ- ಕರ್ನಾಟಕ ಪ್ರದೇಶದ ಹಳ್ಳಿಗಳಲ್ಲಿ ಈಗಲೂ ಪ್ರಚಲಿತವಿರುವ ದೇಸಿಯ ಕಲೆಗಳಾದ ಬಯಲಾಟ- ಸಣ್ಣಾಟಗಳಲ್ಲಿ ಪಾತ್ರ ಮಾಡುವ ಜಾತಿಗೇರ ಜನಾಂಗದ ಹೆಣ್ಣುಗಳಲ್ಲಿ ಒಬ್ಬಳಾದ ಮಾಬಿಯ ಪಾತ್ರವನ್ನು ಕಾದಂಬರಿಯ ಕೇಂದ್ರವಾಗಿಟ್ಟುಕೊಂಡು; ಪಾತ್ರವಾಗಿಟ್ಟುಕೊಂಡು ಒಂದು ಹಳ್ಳಿಯ ಜನರ ಜೀವನ ಮತ್ತು ಅವರ ಸಂಸ್ಕೃತಿ, ಆಚಾರ-ವಿಚಾರಗಳು, ಅವರು ಆಚರಿಸುವ ಹಬ್ಬ ಹರಿದಿನಗಳು, ಹಳ್ಳಿಯ ಧನ ಬಲವುಳ್ಳ ಶ್ರೀಮಂತರು, ಹಳ್ಳಿಯ ಗೌಡರು ಬಡ ಹೆಣ್ಣು ಮಕ್ಕಳ ದೇಹದ ಸುಖ ಪಡೆಯಲು ಹಾತೊರೆಯುವ ರೀತಿ, ಬಡವರ ಸುಂದರ ಹೆಣ್ಣು ಮಕ್ಕಳನ್ನು ತಮ್ಮವರನ್ನಾಗಿ ಮಾಡಿಕೊಳ್ಳಲು ಸಾಕಷ್ಟು ಹಣ ಬಂಗಾರವನ್ನು ವೆಚ್ಚ ಮಾಡುವ ಪರಿ. ತಾವು ಬಯಸಿದ ಹೆಣ್ಣು ದೊರೆಯದೆ ಇದ್ದಾಗ ಅವರ ವಿರುದ್ಧ ಕ್ರೌರ್ಯದ ಮನೋಭಾವನೆ ಇಟ್ಟುಕೊಂಡು; ಅವರ ವಿರುದ್ಧ ಇಲ್ಲ ಸಲ್ಲದ ಗಾಳಿ ಸುದ್ಧಿಯನ್ನು ಹಬ್ಬಿಸಿ, ಅವರ ಹೆಸರಿಗೆ ಕಳಂಕವನ್ನು ತರುವ ಕುತಂತ್ರ, ಊರಿನ ಶ್ರೀಮಂತರ ಮಧ್ಯದಲ್ಲಿ ಬಡವರ ಹೆಣ್ಣಿಗಾಗಿ ನಡೆಯುವ ಪೈಪೋಟಿ. ಇದರಿಂದ ಹುಟ್ಟಿಕೊಳ್ಳುವ ವೈರತ್ವ ಹಳ್ಳಿಯ ಮುಗ್ಧ ಜೀವಿಗಳ ಬದುಕನ್ನು ತಲ್ಲಣಗೊಳಿಸುವ ಚಿತ್ರಣಗಳು ಈ ಕಾದಂಬರಿಯಲ್ಲಿ ಮೈದಳೆದು ನಿಂತಿವೆ.

ಸಣ್ಣಗೌಡಸಾನಿ ಕಾದಂಬರಿಯಲ್ಲಿ ಪ್ರಮುಖ ವ್ಯಕ್ತಿಗಳಾದ ಸೂಗನಗೌಡ, ಗಂಗಪ್ಪ ಸಾಹುಕಾರ, ಪಾರ್ವತಿ, ಕಾಳವ್ವ, ಮಾಬಿ, ಗುರುಬಸಪ್ಪ, ಭೀಮನಗೌಡ ಮುಂತಾದ ಭಿನ್ನ ಸ್ವಭಾವದ ವ್ಯಕ್ತಿ ಪಾತ್ರಗಳು ಈ ಕಾದಂಬರಿಯಲ್ಲಿ ಮೂಡಿನಿಂತಿವೆ. ಸಣ್ಣಗೌಡಸಾನಿ ಕಾದಂಬರಿ ಪ್ರಾರಂಭವಾಗುವುದೇ ಬಯಲಾಟದ ಮೂಲಕ. ಕಾದಂಬರಿ ಮುಕ್ತಾಯವಾಗುವುದು ಕೂಡ ಬಯಲಾಟದ ಮೂಲಕ. ಇದು ಕಾದಂಬರಿಯ ವಿಶೇಷತೆಯಾಗಿದೆ. ಪ್ರಾರಂಭದಲ್ಲಿ ಊರಿನ ಗೌಡನಾದ ಸೂಗನಗೌಡ ಜಾತಗೇರ ನಾಟಕ ಕರೆಯಿಸಿ, ನಾಟಕಕ್ಕೆ ತಗಲುವ ಎಲ್ಲ ಖರ್ಚು ವೆಚ್ಚಗಳನ್ನು ತಾನೇ ಕೊಟ್ಟು ನಾಟಕವನ್ನು ಆಡಿಸಿದರೆ, ಕಾದಂಬರಿಯ ಕೊನೆಯಲ್ಲಿ ಗಂಗಪ್ಪ ಸಾಹುಕಾರ ನಾಟಕವನ್ನು ಆಡಿಸುವನು.

'ಸಣ್ಣಗೌಡಸಾನಿ' ಕಾದಂಬರಿಯಲ್ಲಿ ಸಿದ್ಧನಹಳ್ಳಿಯ ಗೌಡನಾಗಿ 'ಸೂಗನಗೌಡನ' ಪಾತ್ರ ನಿಂತಿದೆ. ಈ ಪಾತ್ರ ಆದರ್ಶ ಪಾತ್ರವಾಗಿ ಮೂಡಿ ಬಂದಿದೆ. ಸೂಗನಗೌಡ ಸಾಕಷ್ಟು ಹೊಲ, ಮನೆ, ಸಂಪತ್ತನ್ನು ಹೊಂದಿ, ಪಾರ್ವತಿ ಎಂಬ ಹೆಂಡತಿಯೊಡನೆ ಸುಖವಾಗಿ ಬದುಕುತಿರುತ್ತಾನೆ. ತಾನು ಕೊಟ್ಟ ನಾಟಕದಲ್ಲಿ ಪಾತ್ರ

ಮಾಡಿದ ಜಾತಗೇರ ಜನಾಂಗದ ಮಾಬಿಯನ್ನು ಮೆಚ್ಚಿ; ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಕಾದಂಬರಿಯ ಇನ್ನೊಂದು ಪ್ರಮುಖ ಪಾತ್ರ 'ಗಂಗಪ್ಪ ಸಾಹುಕಾರ' ಇವನು ಹೆಸರಿಗೆ ತಕ್ಕಂತೆ ಊರಿನ ಶ್ರೀಮಂತ, ಆದರೆ ಆತ ದುಷ್ಟ ಗುಣಗಳ ವ್ಯಕ್ತಿ. ಹಳ್ಳಿಯಲ್ಲಿ ತನ್ನ ಕುತಂತ್ರ ಬುದ್ಧಿ ಮೂಲಕ ಆಗಾಗ ಅಶಾಂತಿಯನ್ನು ಸೃಷ್ಟಿಸುವ ಕೇಡು ಬುದ್ಧಿಯವ. ಮಾಡುವುದಕ್ಕಿಂತ ಕೆಡಿಸುವುದರಲ್ಲಿಯೇ ನಿಸ್ಸೀಮ. ತಾನು ಬಯಸಿದ್ದು ತನಗೆ ದೊರೆಯಬೇಕು. ತನಗೆ ದೊರೆಯದು ಬೇರೆ ಯಾರಿಗೂ ದೊರೆಯಬಾರದೆಂಬ ದುರ್ಗುಣವುಳ್ಳ ವ್ಯಕ್ತಿ ಗಂಗಪ್ಪ. ನಾಟಕದಲ್ಲಿ ಪಾತ್ರ ಮಾಡಿದ ಮಾಬಿಯನ್ನು ಮೆಚ್ಚಿದ ಗಂಗಪ್ಪ ಅವಳನ್ನು ಒಲಿಸಿಕೊಳ್ಳಲು ಶತ ಪ್ರಯತ್ನಿಸುತ್ತಾನೆ. ಮಾಬಿಯನ್ನು ಒಲಿಸಿಕೊಳ್ಳಲು ಸೂಗನಗೌಡ ಕುಂತಲಗಿತ್ತಿ ಕಾಳವ್ವನ ಮೂಲಕ ಪ್ರಯತ್ನಿಸಿದರೆ ಗಂಗಪ್ಪ ಸಾಹುಕಾರ ಕೂಡ ಮಾಬಿಯನ್ನು ಪಡೆದುಕೊಳ್ಳಲು ಅದೇ ಕಾಳವ್ವನ ಮುಖಾಂತರ ಪ್ರಯತ್ನಿಸುತ್ತಾನೆ. ಮಾಬಿಯನ್ನು ಪಡೆಯಲು ಸಾಹುಕಾರ ಮತ್ತು ಗೌಡನ ಮಧ್ಯೆ ತೆರೆಮರೆಯಲ್ಲಿ ಕಸರತ್ತುಗಳು ನಡೆಯುತ್ತವೆ. ಎಷ್ಟೇ ಹಣ ಖರ್ಚಾದರೂ ಮಾಬಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಗಂಗಪ್ಪ ಸಾಹುಕಾರನ ಹಠ ವಿಫಲವಾಗುತ್ತದೆ. ಆದರೆ ಮಾಬಿ ಗಂಗಪ್ಪನಿಗೆ ದೊರೆಯದೆ ಸೂಗನ ಗೌಡನನ್ನು ಮೆಚ್ಚಿದಾಗ ಗಂಗಪ್ಪನಿಗೆ ನಿರಾಶೆ ಯಾಗುತ್ತದೆ. ಒಂದು ಹಳ್ಳಿಯ ಹೆಣ್ಣು ಗುಣಕ್ಕೆ ಒಲಿಯುತ್ತಾಳೆ ವಿನಾ ಹಣಕ್ಕೆ ಅಲ್ಲ, ಎಂಬ ಮಾತಿಗೆ ಮಾಬಿಯ ಪಾತ್ರ ನಿದರ್ಶನ. ತಾನು ಬಯಸಿದ ಮಾಬಿ ತನ್ನಗೆ ದೊರೆಯದ ಇದ್ದಾಗ ಗಂಗಪ್ಪ ಸಾಹುಕಾರ ಆಕೆಯ ವಿರುದ್ಧ ಹಳ್ಳಿಯಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಅವಳ ಮೇಲೆ ಸೇಡನ್ನು ತೀರಿಸಿಕೊಳ್ಳಲು ಯತ್ನಿಸುತ್ತಾನೆ. ತನಗೆ ಒಲಿಯದ ಮಾಬಿಯನ್ನು ತನ್ನವಳನ್ನಾಗಿ ಮಾಡಿಕೊಂಡ ಸೂಗನಗೌಡನ ಬಾಳಿನಲ್ಲಿ ಬಿರುಗಾಳಿಯನ್ನು ಎಬ್ಬಿಸಿ, ಗೌಡನ ಬಾಳು ಹಾಳಾಗುವಂತೆ ಮಾಡಿದ ಗಂಗಪ್ಪನ ಪಾತ್ರ ದುಷ್ಟ ಪಾತ್ರವಾಗಿ, ಖಳನಾಯಕನ ಪಾತ್ರವಾಗಿ ಕಾದಂಬರಿಯಲ್ಲಿ ಮೂಡಿ ನಿಂತಿದೆ. ಸೂಗನಗೌಡ ಮಾಬಿಯ ಕೈ ಹಿಡಿದು ತನ್ನ ಮನೆಯಲ್ಲಿ ತಂದು ಇಟ್ಟುಕೊಳ್ಳುತ್ತಾನೆ. ಅವಳನ್ನು ಮದುವೆಯಾದ ಹೆಂಡತಿಯಂತೆ ಪ್ರೀತಿ, ವಿಶ್ವಾಸದಿಂದ ನೋಡಿ ಕೊಳ್ಳುತ್ತಾನೆ.

ಸೂಗನಗೌಡನ ಮನೆಯನ್ನು, ಮನವನ್ನು ಪ್ರವೇಶಿಸಿದ ಮಾಬಿ ತನ್ನಲ್ಲಿರುವ ಉದಾತ್ತ ಗುಣಗಳಿಂದ ಹಳ್ಳಿಯ ಜನರ ಮನಗೆಲ್ಲುತ್ತಾಳೆ. ಹಳ್ಳಿಯ ಬಡವರಿಗೆ ಕಷ್ಟದಲ್ಲಿ ಸಹಾಯ ಮಾಡಿ ಬಡವರ ಪಾಲಿನ ಆಪದ್ಬಾಂಧವಳಾಗಿ ಸೂಗನಗೌಡನ ಹೆಂಡತಿಯಾದ ಪಾರ್ವತಿಯ ಪ್ರೀತಿಗೂ ಪಾತ್ರಳಾಗುತ್ತಾಳೆ. ಊರಿನ ಜನರೆಲ್ಲ ಪಾರ್ವತಿಯನ್ನು 'ದೊಡ್ಡಗೌಡಸಾನಿ' ಎಂದು, ಬಡವರ ಪಾಲಿನ ದೇವತೆಯಾದ ಮಾಬಿಯನ್ನು 'ಸಣ್ಣಗೌಡಸಾನಿ' ಎಂದು ಕರೆಯುತ್ತಾರೆ. ಮನೆಗೆ ಮತ್ತು ಮಂದಿಗೆ ಪ್ರೀಯಳಾದ ಮಾಬಿ ಗಂಗಪ್ಪ ಸಾಹುಕಾರ ಕೊಡುವ ಕಿರುಕುಳವನ್ನು ಸ್ಥೈರಣೆಯಿಂದ ಎದುರಿಸುತ್ತಾಳೆ. ಗೌಡನ ಬದುಕಿನ ಬಂಡಿಗೆ ಹೆಗಲು ಕೊಟ್ಟು ಮುನ್ನಡೆಸುತ್ತಾಳೆ.

ಸೂಗನಗೌಡ ಮತ್ತು ಮಾಬಿಯ ಮೇಲೆ ಸೇಡನ್ನು ತೀರಿಸಿಕೊಳ್ಳಲು ಗಂಗಪ್ಪ ಸೂಗನಗೌಡನ ಮಗನಾದ ಭೀಮನಗೌಡನನ್ನು ದಾಳವಾಗಿ ಬಳಸುತ್ತಾನೆ. ಅವನ ಕಿವಿಯಲ್ಲಿ ಇಲ್ಲ ಸಲ್ಲದ ಚಾಡಿ ಮಾತುಗಳನ್ನು ಊದುತ್ತಾನೆ. ಭೀಮನಗೌಡನನ್ನು ತನ್ನ ಅಸ್ತ್ರವನ್ನಾಗಿ ಮಾಡಿ ಕೊಂಡು ಸೂಗನ ಗೌಡನ ಬದುಕಿಗೆ ಕೊನೆ ಹಾಡುತ್ತಾನೆ. ಮಾಬಿಯ ಬಗ್ಗೆ ಇಲ್ಲ ಸಲ್ಲದ ವಿಷಯಗಳನ್ನು ಹೇಳಿ, ಮಾಬಿಯನ್ನು ಭೀಮನಗೌಡ ಮನೆಯಿಂದ ಹೊರಹಾಕುವ ತಂತ್ರದಲ್ಲಿ ಸಫಲನಾಗುತ್ತಾನೆ. ಮಾಬಿ ಕೊನೆಯಲ್ಲಿ ಊರಿಗಷ್ಟೆ ಅಲ್ಲದೇ ಈ ಜಗತ್ತಿನಿಂದಲೇ ದೂರವಾಗುವಂತೆ ನೀರು ಪಾಲಾಗುತ್ತಾಳೆ. ಮಾಬಿಯ ಕೊನೆಯಾದ ಮೇಲೆ ತನ್ನ ಸೇಡು ತೀರಿಸಿಕೊಂಡೆ ಎಂಬ ಸಂತೋಷದಿಂದ ಗಂಗಪ್ಪ ಸಾಹುಕಾರ ಜಾತಕಾರರಿಂದ ನಾಟಕ ಆಡಿಸುತ್ತಾನೆ. ಗಂಗಪ್ಪನ ಪಾತ್ರದಂತಹ ಅನೇಕ ಜನರನ್ನು ನಾವು ಸಮಾಜದಲ್ಲಿ; ನಮ್ಮ ಸುತ್ತ ಮುತ್ತ ಕಾಣುತ್ತೇವೆ. ಒಬ್ಬರ ಕಷ್ಟವನ್ನು, ನೋವನ್ನು ನೋಡಿ ಸಂತೋಷಪಡುವ ಜನರ ಪ್ರತೀಕವಾಗಿ ಗಂಗಪ್ಪ ಸಾಹುಕಾರನ ಪಾತ್ರ ಕಾದಂಬರಿಯಲ್ಲಿ ಮೂಡಿ ನಿಂತಿದೆ.

ಸಣ್ಣಗೌಡಸಾನಿ ಕಾದಂಬರಿ ಒಂದು ಗ್ರಾಮದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಆಯಾಮಗಳೆಲ್ಲಕ್ಕೂ ನೈಜ ಅಭಿವ್ಯಕ್ತಿ ಕೊಡುತ್ತದೆ. ಕಾದಂಬರಿಯಲ್ಲಿನ ಪಾತ್ರಗಳು ಕಾಲ್ಪನಿಕ ಪಾತ್ರಗಳಾಗಿರದೇ ಹಳ್ಳಿಯ ನೈಜ ಪಾತ್ರಗಳಾಗಿವೆ. ಕಾದಂಬರಿಯ ಕಥೆಯನ್ನು ವಾಸ್ತವವಾದದ ನೆಲೆಯಲ್ಲಿ ಗಟ್ಟಿಗೊಳಿಸಲು ಕಥೆಯನ್ನು ರಸವತ್ತಾಗಿ ಮಾಡಲು ಅವಶ್ಯಕವಾದ ಪಾತ್ರದ ಕಲ್ಪನೆಯನ್ನು ಕಾದಂಬರಿಕಾರ ಬಳಸಿಕೊಂಡಿದ್ದಾರೆ. ಹಳ್ಳಿಗಳಲ್ಲಿ ಸಂಗಣ್ಣ, ಶಿವಣ್ಣ, ಮಾರೆಪ್ಪಾ, ಕಾಮಣ್ಣ ಎಂದು ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ಹೆಸರಿಟ್ಟಿದ್ದರೂ ಜನರು ಅವರನ್ನು ಸಂಗ್ಯಾ, ಶಿವ್ಯಾ, ಕಾಮ್ಯಾ, ಮಾರ್‍ಯಾ ಎಂದು ಕರೆಯುವುದು ಸಹಜ ಅದಕ್ಕಾಗಿ ಕಾದಂಬರಿಕಾರ ಹಳ್ಳಿಯ ವಾಡಿಕೆಯಂತೆ ಜನರು ಕರೆಯುವ ಹೆಸರುಗಳನ್ನೆ ಕಾದಂಬರಿಕಾರ ಸಣ್ಣಪುಟ್ಟ ಪಾತ್ರಗಳಿಗೆ ಕೊಟ್ಟಿರುವುದು ಕಾಣುತ್ತೇವೆ. ಈ ಚಿಕ್ಕ ಪಾತ್ರಗಳು ಕಾದಂಬರಿಯ ಪ್ರಮುಖ ಪಾತ್ರಗಳ ಮಧ್ಯ ಕೊಂಡಿಯಾಗಿ ನಿಂತಿವೆ. ಈ ಪಾತ್ರಗಳು ಕೂಡ ಕಾದಂಬರಿಯ ಜೀವಾಳವಾಗಿವೆ. ಕಾದಂಬರಿಯ ನಾಯಕಿ ಮಹೀಬೂಬಜಾನ್ ಎಂಬ ಹೆಸರು ಹಳ್ಳಿಯ ಜನರ ಬಾಯಲ್ಲಿ ಮಾಬಮ್ಮಾ, ಮಾಬು, ಮಾಬಿ ಎಂದು ಭಿನ್ನ ರೀತಿಯಿಂದ ಕರೆಯುವುದು ಕಾದಂಬರಿಯುದ್ದಕ್ಕೂ ಕಂಡು ಬರುತ್ತದೆ. ಆದರೆ ಮಾಬಿ ಎಂಬುವುದೇ ಜನ ಬಳಕೆಯಲ್ಲಿರುವ ಕಾರಣ 'ಮಾಬಿ' ಎಂಬ ಹೆಸರನ್ನೇ ಕಾದಂಬರಿಕಾರ ಕಾದಂಬರಿಯಲ್ಲಿ ಹೆಚ್ಚಾಗಿ ಬಳಸಿದ್ದಾರೆ.

ಸಣ್ಣಗೌಡಸಾನಿ ಕಾದಂಬರಿ ಸ್ವಾತಂತ್ರ್ಯ ಪೂರ್ವದ ಹೈದ್ರಾಬಾದ-ಕರ್ನಾಟಕ ಪ್ರದೇಶದ ಹಳ್ಳಿ ಜನರ ಸಂಸ್ಕೃತಿಯ ಬೇರುಗಳನ್ನು ಒಳಗೊಂಡಿದೆ. ಸಂಸ್ಕೃತಿ ಎಂದರೆ ಸಾಮಾನ್ಯವಾಗಿ ಬದುಕಿನ ಸುಂದರ ಮುಖವಷ್ಟೇ ಅಲ್ಲ. ಅದು ಒಳಿತು-ಕೆಡಕು ಸತ್ಯ-ಸುಳ್ಳು ಮುಂತಾದವುಗಳನ್ನು ಒಳಗೊಳ್ಳುವ ಸಾಮಾಜಿಕ ದೌರ್ಬಲ್ಯ, ಹಾದರತನದಿಂದ ಕೂಡಿದ ಜೀವಂತ ಜನತೆಯ ಸಮಗ್ರ ಜೀವನ ವಿಧಾನವೇ ಸಂಸ್ಕೃತಿ, ಎಂಬುದನ್ನು ಈ ಕಾದಂಬರಿಯಿಂದ ಅರಿತುಕೊಳ್ಳಬಹುದಾಗಿದೆ.

ಶಾಂತರಸರು ತಮ್ಮ ಸಣ್ಣಗೌಡಸಾನಿ ಕಾದಂಬರಿಯಲ್ಲಿ ಹೈದ್ರಾಬಾದ-ಕರ್ನಾಟಕ ಭಾಗದ ಜನರಾಡುವ ಆಡು ಭಾಷೆಯನ್ನೇ ಬಳಸಿಕೊಂಡದ್ದು ವಿಶೇಷವಾಗಿದೆ. ದಲಿತ ಕಾದಂಬರಿಕಾರ ದೇವನೂರು ಮಹಾದೇವ ಅವರ ಕಾದಂಬರಿಗಳನ್ನು ಓದಿ ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲು ಚಾಮರಾಜನಗರ ಜಿಲ್ಲೆಯ ಆಡು ಭಾಷೆಯನ್ನು ಬಲ್ಲವರಿಗೆ ಮಾತ್ರ ಸಾಧ್ಯ. ಹಾಗೆಯೇ ಶಾತರಸರ ಸಣ್ಣಗೌಡಸಾನಿ ಕಾದಂಬರಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಹೈದ್ರಾಬಾದ-ಕರ್ನಾಟಕ ಭಾಗದ ಆಡುಭಾಷೆಯನ್ನು ಅರಿತವರಿಂದ ಮಾತ್ರ ಸಾಧ್ಯ. ಸಣ್ಣಗೌಡಸಾನಿ ಕಾದಂಬರಿ ಸಂಪೂರ್ಣವಾಗಿ ಗ್ರಾಮ್ಯ ಭಾಷೆಯಲ್ಲಿ ರಚನೆಯಾಗಿದೆ. ಈ ಕಾದಂಬರಿಯಲ್ಲಿ ಬಳಕೆಯಾದ ಕೆಲವು ಶಬ್ದಗಳ ಅರ್ಥ ಯಾವ ಶಬ್ದ ಕೋಶಗಳಲ್ಲಿಯೂ ದೊರೆಯುವುದಿಲ್ಲ. ಆ ಶಬ್ದಗಳ ಅರ್ಥ ಆ ಭಾಗದ ಜನರಿಂದ ಮಾತ್ರ ತಿಳಿಯಲು ಸಾಧ್ಯ. ಪಾತ್ರಗಳ ಸಂಭಾಷಣೆ ವೈಶಿಷ್ಟ್ಯಪೂರ್ಣವಾಗಿದೆ. ಕಾದಂಬರಿಯಲ್ಲಿ ಬಳಕೆಯಾದ ಬೈಗುಳಗಳು ಈ ಪ್ರದೇಶದ ವಿಶಿಷ್ಟ ಬೈಗುಳಗಳಾದ ಜಾತಿನಾಡಾ, ತುರುಬ್ ಕೊಯ್ತಿನಿ, ಹಲ್ಕಟ್ಟ ಸೂಳೆಮಗ, ಮುಂತಾದ ಬೈಗುಳಗಳು ಕಾದಂಬರಿಯಲ್ಲಿ ಬಳಕೆಯಾಗಿವೆ.

ಸಣ್ಣಗೌಡಸಾನಿ ಕಾದಂಬರಿಯಲ್ಲಿ ನೈಜ ಬದುಕಿನ ಪ್ರಖರ ಛಾಯೆಯನ್ನು

ಕಾಣುತ್ತೇವೆ. ಕಾದಂಬರಿಯ ಕೊನೆಯಲ್ಲಿ ಕಥಾ ನಾಯಕ ಸೂಗನಗೌಡ ತನ್ನ ಮಗನ ಕೆಟ್ಟ ಗುಣಗಳಿಗೆ ರೋಸಿ ಹೋಗುತ್ತಾನೆ. ಮಗನ ದುಷ್ಟಗುಣಗಳ ಬಗ್ಗೆ ಚಿಂತಾಕ್ರಾಂತ ನಾಗಿ ಅದೇ ಚಿಂತೆಯಲ್ಲಿ ಹಾಸಿಗೆ ಹಿಡಿದು ಕೊನೆ ಉಸಿರು ಎಳೆಯುತ್ತಾನೆ. ಕಥಾನಾಯಕಿ ಮಾಬಮ್ಮಾ ಮನೆ ಬಿಟ್ಟು ಹೋಗುವಾಗ ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗುವ ದುರಂತವನ್ನು ಕಾಣುತ್ತೇವೆ. ಕಾದಂಬರಿಯ ಕಥಾ ನಾಯಕ ಮತ್ತು ಸಾವಿಗೆ ಅಪ್ರತ್ಯಕ್ಷವಾಗಿ ಗಂಗಪ್ಪ ಸಾಹುಕಾರನ ಕುತಂತ್ರಗಳೇ ಕಾರಣ. 'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ' ಎಂಬ ಗಾದೆ ಮಾತಿಗೆ ತದ್ವಿರುದ್ಧವಾಗಿ ಸಜ್ಜನರ, ಸತ್ಯವಂತರ ಜೀವನದಲ್ಲಿಯೇ ಅನೇಕ ಕಷ್ಟ ಕಾರ್ಪಣ್ಯಗಳು ಬಂದು ಅವರ ಬದುಕಿಗೆ ಅಂತ್ಯವನ್ನು ಬರೆಯುತ್ತವೆ. ದುಷ್ಟರು, ಕುತಂತ್ರಿಗಳು, ಸುಳ್ಳಿಗರು ಸುಖದಿಂದ ಬದುಕುತ್ತಾರೆ ಎಂಬುದಕ್ಕೆ ಪ್ರತೀಕವಾಗಿ ಗಂಗಪ್ಪ ಸಾಹುಕಾರನ ಪಾತ್ರ ಚಿತ್ರಣಗೊಂಡಿದೆ.

ಕಾದಂಬರಿಗಳಲ್ಲಿ ನಾಯಕ ನಾಯಕಿ ಅನೇಕ ಎಡರು ತೊಡರುಗಳನ್ನು ಎದುರಿಸಿ ಕಾದಂಬರಿಯ ಕೊನೆಯಲ್ಲಿ ಸಫಲತೆಯನ್ನು ಪಡೆಯುತ್ತಾರೆ. ಆದರೆ ಶಾಂತರಸರ 'ಸಣ್ಣಗೌಡಸಾನಿ' ಕಾದಂಬರಿಯಲ್ಲಿ ಕುತಂತ್ರಗಳಿಗೆ ಬಲಿಯಾಗಿ ನಾಯಕ ನಾಯಕಿಯರ ಬದುಕು ದುರಂತಕ್ಕೆ ಈಡಾಗುವುದು ಅದಕ್ಕಾಗಿಯೇ ಶಾಂತರಸರ ಕಾದಂಬರಿ ಇತರ ಕಾದಂಬರಿಗಳಿಗಿಂತ ಭಿನ್ನವಾದದ್ದು. ಶಾಂತರಸರ ಅನುಭವದ ಆಳ, ನಿರೂಪಣಾ ತಂತ್ರ, ದೇಶಿಯ ಆಡು-ನುಡಿ, ವಾಸ್ತವಿಕತೆಯ ಕಥಾ ವಸ್ತು ಮುಂತಾದವುಗಳಿಂದಾಗಿ ಸಣ್ಣಗೌಡಸಾನಿ ಕಾದಂಬರಿ ಗ್ರಾಮೀಣ ಬದುಕನ್ನು ಕಣ್ಣು ಮುಂದೆ ಕಟ್ಟುವ ಒಂದು ಅನನ್ಯವಾದ ಕೃತಿಯಾಗಿದೆ.

ಸಣ್ಣಗೌಡಸಾನಿ ಕಾದಂಬರಿ ಕುರಿತು ಸಾಹಿತಿ ಕುಂ. ವೀರಭದ್ರಪ್ಪ ಹೇಳಿದ ಮಾತುಗಳು ಗಮನಾರ್ಹವಾಗಿವೆ. "ನೈಜಾಂ ಪ್ರಾದೇಶಿಕ ಬದುಕಿನ ಸ್ಥಿತಿ ಮತ್ತು ಸಾಧ್ಯತೆಗಳನ್ನು ತೀರಾ ನಿರಾಭರಣ ರೀತಿಯಲ್ಲಿ ಇಲ್ಲಿ ಅಡಕಗೊಳಿಸಿರುವುದರಿಂದ ಈ ಪುಟ್ಟ ಕಾದಂಬರಿ ಎಲ್ಲೂ ಗೊಂಡಾರಣ್ಯವಾಗಿರದೆ ಬಯಲು ಸೀಮೆಯ ಅಗಮ್ಯತೆಯನ್ನು ಸಾಧಿಸಿದೆ. ಕಾದಂಬರಿಯ ಕರಾಳ ಪಾತ್ರವಾದ ಗಂಗಪ್ಪ. ಸ್ಪಂದನಶೀಲ ವ್ಯಕ್ತಿತ್ವದ ಸೂಗನಗೌಡ ಕಾಲೇಜು ಕಟ್ಟೆ ಹತ್ತಿಳಿದ ಮಗ ಭೀಮನಗೌಡನ ಮೂಲಕ ಕುಟುಂಬ ವ್ಯವಸ್ಥೆಯ ಮೂಲಆಸ್ತಿ ಭಾರವಾದ ಅಂತ:ಕರಣವನ್ನು ದಾರುಣವಾಗಿ ನಾಶಪಡಿಸುವುದು, ಸಬ್ಜೆಕ್ಟಿವಿಟಿಯನ್ನು ಮೀರಿ ಓದುಗರ ಅನುಕಂಪಕ್ಕೆ ಲಗ್ಗೆ ಇಕ್ಕುವ ತ್ಯಾಗಮಯಿ ಸ್ತ್ರೀಪಾತ್ರವಾದ ಮಾಬಮ್ಮ. ಜನಪದ ಸಾಂಸ್ಕೃತಿಕ ನೆಲೆಯಿಂದ ಸಣ್ಣಗೌಡಸಾನಿಯಂಥ ಉಸಿರುಗಟ್ಟಿಸುವ ಫ್ಯೂಡಲ್ ಪರಿಕಲ್ಪನೆಗೇರಿ ಭಾರತೀಯ ಮಹಿಳೆಯರಿಗೆ ಸಹಜವಾದ ಒಂದು ಕ್ರಿಯಾತ್ಮಕ ಚಲನಶೀಲತೆಯನ್ನು ಇಡೀ ಹಳ್ಳಿಗೆ ತರ್ಕಾತೀತವಾಗಿ ತಂದುಕೊಡುವುದನ್ನು ತೀರಾ ನಿರುದ್ವಿಗ್ನತೆಯಿಂದ ಚಿತ್ರಿಸಿರುವುದು ನೈಜಾಂ ಕರ್ನಾಟಕದ ಹಿರಿಯ ಲೇಖಕ ಶಾಂತರಸರ ಸ್ವೋಪಜ್ಞತೆಗೆ ಒಳ್ಳೆಯ ಉದಾಹರಣೆ". ಸಣ್ಣಗೌಡಸಾನಿ ಕಾದಂಬರಿಯನ್ನು ಓದಿದರೆ ಸಂಪೂರ್ಣ ಗ್ರಾಮೀಣ ಬದುಕಿನ ಚಿತ್ರಣದ ದರ್ಶನವಾಗುತ್ತದೆ. ಕಾದಂಬರಿಯನ್ನು ಓದುತ್ತಿದ್ದರೆ, ಓದುಗನಲ್ಲಿ ಕಾತುರತೆಯನ್ನು ಮೂಡಿಸಿ ಓದಿನಲ್ಲಿ ತಲ್ಲಿನಗೊಳಿಸುತ್ತದೆ. ಹೊಸಗನ್ನಡ ಕಾದಂಬರಿ ಲೋಕದಲ್ಲಿ ಸಣ್ಣಗೌಡಸಾನಿ ಒಂದು ವಿಶಿಷ್ಟವಾದ ಮತ್ತು ಮೌಲಿಕವಾದ ಕಾದಂಬರಿಯಾಗಿದೆ. ಶಾಂತರಸರು ಬರೆದ ಕಾದಂಬರಿಗಳ ಸಂಖ್ಯೆ ವಿರಳವಾಗಿದ್ದರೂ; ಸಣ್ಣಗೌಡಸಾನಿ ಕಾದಂಬರಿ ಅವಲೋಕಿಸಿದರೆ ಅವರು ಒಬ್ಬ ಶ್ರೇಷ್ಠ ಕಾದಂಬರಿಕಾರ ಎಂಬುದರಲ್ಲಿ ಅನ್ಯಮಾತಿಲ್ಲ.